SRI S. M. YAHYA.—The total Investment as on March 1989 was Rs. 3977 crores, out of which the share capital and the loan from the Karnataka Government constitutes Rs. 2117 crores and other financial institution is Rs. 1859 crores. As far as losses are concerned. 77% of the losses are of the uudertakings like K.P.C., K.E.B., KSRTC., K.S.F.C. and M.P.M., we are all aware, many of these Government Undertakings are Public Utility organisations. They are developmented and service organisations. There, the commercial gradation is not there Inspite of it, the Government is making sustained efforts to keep the losses down. I am happy to say that many of those organisations which were in red have been improving. N.G.E.F., which sustained loss, has again become a profitable organisation. Mysore Paper Mills which was also under loss, is again coming into a profitable organisation. Government is making all efforts to see that there should not be any further loss.

SRI SHAFFI AHMED.—What is the time-bound programme you have taken to overcome these losses ?

SRI S. M. YAHYA.—These are mostly non-commercial organisations and there connot by any time-bound programme. We can take steps to reduce or bring down the losses.

ಶ್ರೀ ಜೆ. ಸಿ. ಮಂಧುಸ್ವಾಮಿ.—ಕೆ.ಪಿ.ಸಿ.ಯವರು ಲಾಭ ಮಾಡುತ್ತಿದ್ದಾರೆ ಮತ್ತು ಕೆ.ಇ.ಬಿ. ಯವರು ನಷ್ಟ ಅನುಭವಿಸುತ್ತಿದ್ದಾರೆ. ಕೆ ಪಿ.ಸಿ.ಯ ಲಾಭವನ್ನು ಕಾನೂನು ಕೆಳಗಡೆ ಡೀವಿಯೇಟ್ ಮಾಡಿ ಕೆ.ಇ.ಬಿ.ಯ ನಷ್ಟವನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿದೆಯೆ ?

ಶ್ರೀ ಎಸ್. ಎಂ. ಯಾಹ್ಯಾ.—ಕೆ.ಇ.ಬಿ. ಮತ್ತು ಕೆ.ಪಿ.ಸಿ.ಯ ಆಬ್ಜೆಕ್ಟ್‌ಗಳು ಬೇರೆ ಇವೆ. ಕೆ.ಪಿ.ಸಿ ಹೆಚ್ಚು ಲಾಭ ಮಾಡುತ್ತಿಲ್ಲ. ಅದು ಕನ್‌ಸ್ಟ್ರಕ್ಷನ್‌ನಲ್ಲಿದೆ. ಬಹಳ ಲಾಭ ಏನೂ ಇಲ್ಲ. ಕೆ.ಪಿ.ಸಿ. ವಿದ್ಯುತ್ ಜನರೇಟ್ ಮಾಡತಕ್ಕಂಥ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಿರುವುದರಿಂದ ಲಾಭ ಕಾಣುತ್ತಿದೆ.

ಶ್ರೀ ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಪ್ರಶ್ನೆ ೧೨೬೫ರ ಬಗ್ಗೆ ತಮ್ಮ ಗಮನಕ್ಕೆ ಒಂದು ಕಾಗದ ಬರೆದಿದ್ದೇನೆ. ಏಕೆಂದರೆ ಸಾಕಷ್ಟು ಮಾಹಿತಿ ಸಂಗ್ರಹಿಸಬೇಕಾಗುತ್ತದೆ ಮಾಹಿತಿ ಪೂರ್ತಿಯಾಗಿ ಬಂದಿಲ್ಲ. ಆದ್ದರಿಂದ ಇದನ್ನು ಹೆಲ್ಡ್ ಓವರ್ ಮಾಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.—ಮಾಹಿತಿ ಪೂರ್ಣವಾಗಿ ಬಂದಿಲ್ಲ ಆದ್ದರಿಂದ ಹೆಲ್ಡ್ ಓವರ್ ಮಾಡಿದ್ದೇನೆ.

ಜಂಪೇನಹಳ್ಳಿ ಅಡ್ಡ ರಸ್ತೆಯಲ್ಲಿ ಎನ್.ಜಿ.ಇ.ಎಫ್. ಘಟಕದ ಸ್ಥಾಪನೆ

೧೨೮೬. ಶ್ರೀ ಆರ್. ನಾರಾಯಣ (ಬೆಳ್ಳಾವಿ).—ಮಾನ್ಯ ಕೈಗಾರಿಕಾ, ಇಂಧನ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕು ಸಿ. ಎನ್. ದುರ್ಗ ಹೋಬಳಿ ಜಂಪೇನಹಳ್ಳಿ ಅಡ್ಡರಸ್ತೆಯಲ್ಲಿ ಸಣ್ಣ ಚಾಲಕ ಯಂತ್ರಗಳನ್ನು (೫ ಅಶ್ವ ವರೆಗೆ) ತಯಾರಿಸಲು ಎನ್.ಜಿ.ಇ.ಎಫ್ ನ ಒಂದು ಘಟಕವನ್ನು ಸ್ಥಾಪಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ ?

ಆ) ಹಾಗಿದ್ದಲ್ಲಿ ಈವರೆಗೆ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕಾ, ಇಂಧನ ಹಾಗೂ ವಕ್ಫ್ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಆರ್. ನಾರಾಯಣ.—ಮಾನ್ಯ ಅಧ್ಯಕ್ಷರೇ, ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡತಕ್ಕಂಥಾದ್ದು ಸರ್ಕಾರದ ನೀತಿಯೆಂಬ ದೃಷ್ಟಿಯಿಂದ ಈ ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಇಲ್ಲಿ ೭೦ ಎಕರೆ ಜಮೀನಿನಲ್ಲಿ ಎನ್.ಜಿ.ಇ.ಎಫ್. ಘಟಕವನ್ನು ಸ್ಥಾಪನೆ ಮಾಡಬೇಕೆಂದು ಇತ್ತು. ಇದನ್ನು ಮಾಡಬೇಕೆಂದು ಎಸ್ಟಿಮೇಟ್ ಮಾಡಲಿಕ್ಕೆ ಪ್ರಯತ್ನ ನಡೆದಿತ್ತು, ಇದು ಮಾನ್ಯ ಹಿಂದಿನ ಸಚಿವರಾಗಿದ್ದ ಶ್ರೀ ವೀರಣ್ಣನವರ ಊರಿನ ಪಕ್ಕದಲ್ಲಿ ಬರುತ್ತ ಇಲ್ಲಿ ೭೦ ಎಕರೆ ಜಮೀನನ್ನು ಕೊಡುವುದಕ್ಕೆ ಎಲ್ಲಾ ಪ್ರಯತ್ನ ಆಗಿತ್ತು ಎಂದು ನನಗೆ ತಿಳಿದು ಬಂದಿದೆ. ಆದರೆ ಇದರ ಬಗ್ಗೆ ಪ್ರಪೋಸಲ್ ಸರ್ಕಾರದ ಮುಂದೆ ಇಲ್ಲವೆಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಇವತ್ತು ನನ್ನ ಕ್ಷೇತ್ರ ನಾಲ್ಕು ತಾಲ್ಲೂಕುಗಳಿಂದ ಕೂಡಿದ್ದು ಸಂಪೂರ್ಣವಾಗಿ ಗ್ರಾಮಾಂತರ ಪ್ರದೇಶದಲ್ಲಿದೆ. ಕನಿಷ್ಟಪಕ್ಷ ಐದು ವರ್ಷಗಳ ಅವಧಿಯಲ್ಲಿ ಒಂದೇ ಒಂದು ಕೈಗಾರಿಕೆಯನ್ನಾದರೂ ಅಲ್ಲಿ ಮಾಡಿಕೊಟ್ಟರೆ ಜನರಿಗೆ ಸಮಾಧಾನ ಆಗುತ್ತದೆ. ಅದಕ್ಕೋಸ್ಕರ ದಯವಿಟ್ಟು ಮಾನ್ಯ ಮಂತ್ರಿಗಳು ಇದರ ಬಗ್ಗೆ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಸರ್ಕಾರದ ವತಿಯಿಂದ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ಇಂಡಸ್ಟ್ರೀಸ್‌ನ್ನು ಈ ರೀತಿ ಸ್ಪ್ರೆಡ್ ಮಾಡುವುದಕ್ಕೆ ಆಗುವುದಿಲ್ಲ. ನೀತಿ ನಿಯಮಗಳ ಪ್ರಕಾರ ಮಾತ್ರ ಮಾಡಿದರೆ ಲಾಭ ಆಗುವುದಕ್ಕೆ ಸಾಧ್ಯ ಇದೆ. ನಿಮ್ಮ ಕ್ಷೇತ್ರದಲ್ಲಿ ಏನು ಆಗಿತ್ತು ಎಂದರೆ ಇದು ಸಾಮಾನ್ಯವಾಗಿ ಆಗುತ್ತದೆ ಯಾರಾದರೂ ಮಂತ್ರಿಗಳು ಆದರೆ ಮಾಡೋಣವೆಂದು ಹೊರಡುತ್ತಾರೆ. ಶ್ರೀ ವೀರಣ್ಣನವರು ಅಧಿಕಾರಿಗಳನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು. ಏನೋ ಎನ್.ಜಿ.ಇ.ಎಫ್. ಘಟಕ ಮಾಡುತ್ತಾರೆ ಎಂದು ಇದು ಸುದ್ದಿ ಸ್ಪ್ರೆಡ್ ಆಯಿತು. ಆಮೇಲೆ ಇದು ಆಗಲಿಕ್ಕೆ ಸಾಧ್ಯವಿಲ್ಲವೆಂದು ಆಯಿತು.

ಆ ಮೇಲೆ ೧೯೮೮–೮೯ರಲ್ಲಿ ಎನ್.ಜಿ.ಇ.ಎಫ್. ಬಹಳ ಲಾಸ್‌ನಲ್ಲಿತ್ತು. ಈ ಕಾರಣದಿಂದ, ಈ ಪ್ರಪೋಸಲ್ ಇಲ್ಲ. ಬೇರೆ ಯಾವುದಾದರೂ ರೀತಿ ಮಾಡುವುದಾದರೆ, ಖಾಸಗಿ ಸಂಸ್ಥೆಗಳು, ಖಾಸಗಿ ಜನ ಮುಂದೆ ಬಂದರೆ ಮಾತ್ರ ಆದಷ್ಟು ಪ್ರೋತ್ಸಾಹ ಕೊಟ್ಟು ನಿಮ್ಮ ಕ್ಷೇತ್ರದಲ್ಲಿ ಇಂಡಸ್ಟ್ರಿ ಮಾಡುವುದಕ್ಕೆ ಪ್ರೋತ್ಸಾಹ ಕೊಡುತ್ತೇವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ವಿಟ್ಲಕ್ಕೆ ಉಪ–ಖಜಾನೆ

೧೦೫೯. ಶ್ರೀ ರುಕ್ಮಯ್ಯ ಪೂಜಾರಿ (ವಿಟ್ಲ).—ಮಾನ್ಯ ಆರ್ಥಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧. ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲಕ್ಕೆ ಒಂದು ಉಪ ಖಜಾನೆ ಅವಶ್ಯಕತೆ ಇದೆ ಎಂಬುದು ಸರ್ಕಾರಕ್ಕೆ ತಿಳಿದಿದೆಯೇ ?

೨. ಹಾಗಿದ್ದಲ್ಲಿ ಇಲಾಖಾ ವತಿಯಿಂದ ಈ ಬಗ್ಗೆ ಸ್ಥಳ ತನಿಖೆ ಮಾಡಲಾಗಿದೆಯೇ ?

೩. ಹಾಗಿದ್ದಲ್ಲಿ ಇದನ್ನು ಪ್ರಾರಂಭಿಸಲು ತೊಂದರೆ ಏನು ?

೪. ಇದನ್ನು ಯಾವಾಗ ಪ್ರಾರಂಭ ಮಾಡಲಾಗುವುದು ?

ಶ್ರಿ, ಎಂ. ರಾಜಶೇಖರ ಮೂರ್ತಿ (ಆರ್ಥಿಕ ಮಂತ್ರಿಗಳು) —

೧. ವಿಟ್ಲದಲ್ಲಿ ಉಪ ಖಜಾನೆಯನ್ನು ತೆರೆಯುವ ಅವಶ್ಯಕತೆ ಬಗ್ಗೆ ಸರ್ಕಾರವು ಪರಿಶೀಲಿಸಿಲ್ಲ,

೨. ಸರ್ಕಾರದಲ್ಲಿ ಆರ್ಥಿಕ ವಿಂತವ್ಯಯವಿದ್ದ ಕಾರಣ ಈ ಪ್ರಸ್ತಾವನೆಯನ್ನು ಮುಂದೆ ಹಾಕಲಾಗಿದ್ದರಿಂದ ಸ್ಥಳ ತನಿಖೆ ಮಾಡಲಾಗಲಿಲ್ಲ.

೩. ಈಗಲೂ ಆರ್ಥಿಕ ವಿಂತವ್ಯಯವಿರುವುದರಿಂದ ಉಪ ಖಜಾನೆಯನ್ನು ಪ್ರಾರಂಭ ಮಾಡಲು ಸಾಧ್ಯವಿರುವುದಿಲ್ಲ.

೪. ಸರ್ಕಾರವು ಆರ್ಥಿಕ ವಿಂತವ್ಯಯವನ್ನು ಸಡಿಲಿಸಿದ ನಂತರ ಉಪ ಖಜಾನೆಯನ್ನು ಪ್ರಾರಂಭ ಮಾಡಲು ನಿಗಧಿಪಡಿಸಿರುವ ಸೂತ್ರದ ಪ್ರಕಾರ ಪರಿಶೀಲಿಸಿ ಉಪ ಖಜಾನೆ ತೆರೆಯಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು.